(ಇಂದು ದಿನಾಂಕ 06-03-2020 ರಂದು ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**<u>ಪಾಟೀ ಸವಾಲು – 3 ನೇ ಪ್ರತಿವಾದಿ ಪರ ಶ್ರೀ ಆರ್.ಜಿ.ಎನ್. ವಕೀಲರಿಂದ–</u>**

1. ಈ ದಾವೆಯನ್ನು ಸಲ್ಲಿಸಲು ವಾದಿ ನಂ.1 ರಿಂದ 3 ರವರು ಮಾಹಿತಿಯನ್ನು ನೀಡಿರುತ್ತಾರೆ. ನಾನು ಕೂಡ ಮಾಹಿತಿ ನೀಡಿರುತ್ತೇನೆ. ನನಗೆ ವಾದಿಯರ ಕುಟುಂಬದ ಸಂಪೂರ್ಣ ಮಾಹಿತಿ ಇದೆ . ಸದ್ರಿ ಕುಟುಂಬದ ಪರವಾಗಿ ಆಗಿರುವ ಭೂನ್ಯಾಯಮಂಡಳಿಯ ಆದೇಶದ ಬಗ್ಗೆ ಗೊತ್ತಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿ, ಗೊತ್ತಿದೆ. ಆದರೆ ಸದ್ರಿ ಆದೇಶವನ್ನು ನಾನು ಒಪ್ಪುವುದಿಲ್ಲ ಎನ್ನುತ್ತಾರೆ. ಸದ್ರಿ ಆದೇಶ ದಿನಾಂಕ 22-10-1981 ರಂದು ಆಗಿರುತ್ತದೆ. ಸದ್ರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ, ಕುಟುಂಬದ ಸೌಹಾರ್ದತೆ ಕಾಪಾಡಲು ಮೇಲ್ಮನವಿ ಸಲ್ಲಿಸಿಲ್ಲ ಎನ್ನುತ್ತಾರೆ . ಆ ರೀತಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ಭೂನ್ಯಾಯಮಂಡಳಿಯ ಆದೇಶದ ಪ್ರಕಾರ ವಾದಿ ಮತ್ತು ಪ್ರತಿವಾದಿಯರ ಪರವಾಗಿ ಪ್ರತ್ಯೇಕ ಆಸ್ತಿಗಳು ಮಂಜೂರಾಗಿರುತ್ತವೆ ಎಂದರೆ ಸರಿಯಲ್ಲ . ನಾನು ಯಕ್ಷಗಾನ ಕಲಾವಿದ ಎಂದರೆ ಸರಿ. ವಾದಿಯರ ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ಭೂನ್ಯಾಯಮಂಡಳಿಯಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ ಎಂದು ನನಗೆ ಮಾಹಿತಿ ಇಲ್ಲ . ಪ್ರತಿವಾದಿ ನಂ.3 ರವರು ಯಾವಾಗ ಆಸ್ತಿ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆತ ಸ.ನಂ. 285/2 ಕ್ಷೇತ್ 2-10-0 ಇದನ್ನು ಖರೀದಿಸಿರುತ್ತಾನೆ. ಸದ್ರಿ ಖರೀದಿ ಸಮಯ ತಕರಾರು ಮಾಡಿದ್ದೀರಾ ಎಂದರೆ ಸಾಕ್ಷಿ, ಒಟ್ಟು ಕುಟುಂಬದಲ್ಲಿದ್ದಾಗ ಖರೀದಿ ಮಾಡಿದ ಕಾರಣ ತಕರಾರು ಮಾಡಿಲ್ಲ ಎನ್ನುತ್ತಾರೆ. ಖರೀದಿ ಮಾಡಿದ ನಂತರ 3 ನೇ ಪ್ರತಿವಾದಿ ಸದ್ರಿ ಖರೀದಿಸಿದ ಆಸ್ತಿಯನ್ನು ಯಾವ ರೀತಿ ಉಪಯೋಗಿಸುತ್ತಿದ್ದಾನೆ ಎಂದು ನನಗೆ ಗೊತ್ತಿಲ್ಲ . ಸದ್ರಿ ಖರೀದಿಸಿದ ಆಸ್ತಿ ಮತ್ತು ವಾದಿಯರ ಕುಟುಂಬದ ಆಸ್ತಿಯ ನಡುವೆ ಸುಮಾರು ಅರ್ಧ ಕಿಲೋ ಮೀಟರ ಅಂತರ ಇರಬಹುದು . ನಾನು ಸುಮಾರು 4 - 5 ವರ್ಷಗಳ ಹಿಂದೆ ಒಂದು ಬಾರಿ ಸದ್ರಿ 3 ನೇ ಪ್ರತಿವಾದಿ ಖರೀದಿಸಿದ ಆಸ್ತಿಯನ್ನು ನೋಡಿರುತ್ತೇನೆ. ಮೊಕ್ತ್ಯಾರುನಾಮೆಯನ್ನು ಬರೆಯಿಸಿಕೊಂಡ ನಂತರ ಸದ್ರಿ ಆಸ್ತಿಯನ್ನು ಹೋಗಿ ಪರಿಶೀಲಿಸಿರುತ್ತೀರಾ ಎಂದರೆ ನೋಡಿರುವುದಿಲ್ಲ , ವಯಸ್ಸಾದ ಕಾರಣ ನೋಡಿಲ್ಲ ಎನ್ನುತ್ತಾರೆ. 3 ನೇ ಪ್ರತಿವಾದಿಗೆ ಮಾರಾಟ ಮಾಡಿದ ಆಸ್ತಿ ನಮ್ಮ ವಾದಿಯರ ಒಟ್ಟು ಕುಟುಂಬದ ಆಸ್ತಿಯಲ್ಲ ಎಂದರೆ ಸರಿಯಲ್ಲ . ಸದ್ರಿ ಆಸ್ತಿ 1 ನೇ ಪ್ರತಿವಾದಿಗೆ ಭೂನ್ಯಾಯಮಂಡಳಿಯಿಂದ ಆತನ ಹಕ್ಕಿಗೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ . ಭೂನ್ಯಾಯಮಂಡಳಿಯ ಆದೇಶದ ಪ್ರಕಾರ ವಾದಿ-ಪ್ರತಿವಾದಿಯರು ಪ್ರತ್ಯೇಕವಾಗಿ ಆಸ್ತಿ ವಹಿವಾಟು ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನನಗೆ ದಾವಾಸ್ತಿಗಳ ಬಗ್ಗೆ ಯಾವುದೇ ಮಾಹಿತಿ

ಇಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ತೊಂದರೆ ಮಾಡಲು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೈಜ ದಾವಾ ಕಾರಣ ಇದ್ದರೆ 1991 ರಲ್ಲೇ ದಾವೆ ಸಲ್ಲಿಸುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ